# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 133/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 04-08-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಶ್ರೀನಾಥ ಬಾಬು | | **ಪ್ರಾ.ಸಾ ಃ 08** |
| **ತಂದೆ ಃ ಗಂಡ ಹೆಸರು** | ಃ ಜಯಚಂದ್ರ | | **ಚಾ.ಸಾ ಃ 09** |
| **ವಯಸ್ಸು** | ಃ 43 ವರ್ಷ | | |
| **ಉದ್ಯೋಗ** | ಃ ಮ್ಯಾನೇಜರ, ಮಾರುತಿ ಸುಜಕಿ ಶೋ ರೂಂ ಬೆಂಗಳೂರು | | |
| **ವಾಸಸ್ಥಳ** | ಃ ಬೆಂಗಳೂರು | | |

**<u>ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ</u>**

ನಾನು 2017 ರಿಂದ 2022 ಮೇ ವರೆಗೆ ರೇವಣಕರ ಮೋಟರ್ಸ, ಹುಬ್ಬಳ್ಳಿಯಲ್ಲಿ ಜನರಲ್ ಮ್ಯಾನೇಜರ ಎಂದು ಕರ್ತವ್ಯನಿರ್ಹಿವಸಿದ್ದೇನೆ.

ನನಗೆ ಆರೋಪಿತರ ಪರಿಚಯ ಇಲ್ಲ. ಸುಮಾರು 3-4 ವರ್ಷದ ಹಿಂದೆ ನಮ್ಮ ಶೋ ರೂಂನಿಂದ ಆರೋಪಿತರು ವಾಹನಗಳನ್ನು ಖರೀದಿಸಿದ ಬಗ್ಗೆ ಕಲಘಟಗಿ ಪೋಲೀಸರು ನನ್ನಿಂದ ಮಾಹಿತಿ ಕೋರಿದ್ದರು. ನಾನು ನಮ್ಮ ಅಕೌಂಟ್ಸ ಹಾಗೂ ಕಚೇರಿಯಲ್ಲಿ ಸದರಿ ಗ್ರಾಹಕರು ವಾಹನ ಖರೀದಿಸಿದ್ದಾರೆಯೇ ಅಥವಾ ಹಣ ಪಾವತಿಸಿದ್ದಾರೆಯೇ ಎಂದು ನಮ್ಮ ತಂಡದೊಂದಿಗೆ ಪರಿಶೀಲನೆ ಮಾಡಿ ಪೋಲೀಸರಿಗೆ ಮಾಹಿತಿ ನೀಡಿರುತ್ತೇನೆ. ನಮ್ಮ ಶೋ ರೂಂದಿಂದ ಯಾವುದೆ ವಾಹನ ಖರೀದಿಸಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಪೋಲೀಸರು ನಮ್ಮ ಕಂಪನಿಯಿಂದ ಮಾಹಿತಿ ಕೋರಿದ್ದು ದಿನಾಂಕ 06.05.2019 ರಂದು ಪತ್ರ ಬರೆದಿರುತ್ತಾರೆ. ಅದನ್ನು ನಮ್ಮ ಸಿಬ್ಬಂದಿ ಮೋಹನ ಎನ್ನುವವರು ಪಡೆದುಕೊಂಡಿರುತ್ತಾರೆ. ಸದರಿ ಪತ್ರಕ್ಕೆ ದಿನಾಂಕ 30.10.2017 ರ ಪತ್ರದ ಮುಖಾಂತರ ಮಾಹಿತಿ ನೀಡಿರುತ್ತೇನೆ. ಸದರಿ ಮಾಹಿತಿ ಪತ್ರವನ್ನು ನಿಪಿ-24 ಎಂದು, ಸಾಕ್ಷಿ ಸಹಿಯನ್ನು ನಿಪಿ-24(ಎ) ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರಿಗೆ ಪತ್ರದ ಮುಖಾಂತರ ಮಾಹಿತಿ ನೀಡಿದ್ದು ಸದರಿ ಪತ್ರವನ್ನು ಸಾಕ್ಷಿ ಗುರುತಿಸಿದ್ದು ಪತ್ರವನ್ನು ನಿಪಿ-25, ಸಾಕ್ಷಿ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು. ಪೋಲೀಸರು ನನ್ನನ್ನು ಭೇಟಿ ಆಗಿ ವಿಚಾರಣೆ ಮಾಡಿರುವುದಿಲ್ಲ. ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಪೋಲೀಸರು ಮಾಹಿತಿ ಕೇಳಿದ್ದರು. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುವುದು ನೆನಪಿಲ್ಲ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅನುಮತಿಸಿದೆ)***

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ</u>**

ದಿನಾಂಕ 30.12.2015 ರಂದು 1 ನೇ ಆರೋಪಿ ನಮ್ಮ ಕಂಪನಿಗೆ ಬಂದು ಕೋಟೇಷನ ಪರಿಶೀಲನೆ ಮಾಡಿ 4 ನೇ ಆರೋಪಿ ನಮಗೆ ಬ್ಯಾಂಕ ಸಾಲ ಕೊಡುತ್ತೇನೆ ಅಂತಾ ಹೇಳಿ ನಮ್ಮ ಕಂಪನಿಯಿಂದ ಸ್ವಿಫ್ಟ ಡಿಜೈರ ವಿ ಡಿ ಐ ಸಿಲ್ವರ್ ಕಲರ್ ಕಾರ ಕಿಮ್ಮತ್ತು ರೂ 8,38,099/- ಗಳ ಕೋಟೇಷನ ನಮ್ಮ ಶೋ ರೂಂಗೆ ಸೇರಿದ ದಾಖಲೆ ಆಗಿರುತ್ತದೆ. ಅದನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿರುತ್ತದೆ. ನಿಪಿ-9 ಕ್ಕೆ ನಮ್ಮ ಸಿಬ್ಬಂದಿ ಸಹಿ

ಮಾಡಿರುತ್ತಾರೆ ಅಂದರೆ ನಿಜ. ಆರ್ ಜಿ ಎಸ್ ಮೂಲಕ ಬ್ಯಾಂಕ ಖಾತೆ ನಂ 306201601150017 ನೇದ್ದು ನಮ್ಮ ಮೋಟರ ಪ್ರಾ. ಲಿ. ಗೆ ಸಂಬಂಧಿಸಿದ್ದು ಇರುವುದಿಲ್ಲ. ಸದರಿ ಅಕೌಂಟ ನಮ್ಮ ಸಂಸ್ಥೆ ಬಸವರಾಜ ಇವರಿಗೆ ಬರೆದಿರುವುದಿಲ್ಲ. ಅದನ್ನು ಖೊಟ್ಟಿಯಾಗಿ ಬರೆದಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. 1 ಮತ್ತು 2 ನೇ ಆರೋಪಿತರು ಕಲಘಟಗಿಯ ಎಸ್ ಬಿ ಎಂ ಬ್ಯಾಂಕಿಗೆ ಹೋಗಿ ದಿನಾಂಕ 31.12.2015 ರಂದು ಕಾರ ಖರೀದಿಸುವ ಕುರಿತು ದಾಖಲೆಗಳನ್ನು ಹಾಜರ ಪಡಿಸಿದ್ದು ಅದಕ್ಕೆ 2 ನೇ ಆರೋಪಿ ಜಾಮೀನುದಾರನಾಗಿದ್ದ ಈ ಬಗ್ಗೆ 4 ನೇ ಆರೋಪಿ ದಾಖಲೆಗಳನ್ನು ಪರಿಶೀಲಿಸದೆ ರೂ 5,85,000/- ಹಣವನ್ನು 1 ನೇ ಆರೋಪಿಯ ಎಸ್ ಬಿ ಖಾತೆ ನಂ 64188240226 ನೇದ್ದಕ್ಕೆ ಜಮಾ ಮಾಡಿ 2 ನೇ ಆರೋಪಿಯೊಂದಿಗೆ ಶಾಮಿಲಾಗಿ 1 ನೇ ಆರೋಪಿಯು ಕೋಟೇಷನಲ್ಲಿ ರೇವಣಕರ್ ಮೋಟರ್ಸ ಲಿ. ರವರ ಖಾತೆಗೆ ಹಣ ಜಮಾ ಮಾಡದೆ ಒಳಸಂಚು ಮಾಡಿ 1 ಮತ್ತು 2 ನೇ ಆರೋಪಿತರು ಧಾರವಾಡದಲ್ಲಿರುವ ಕಾರ್ಪೋರೇಷನ ಬ್ಯಾಂಕಿನಲ್ಲಿರುವ 3 ನೇ ಆರೋಪಿಯ ಹೆಸರಿನಲ್ಲಿರುವ ಮೆಃ ರೇವಣಕರ್ ಮೋಟರ್ಸ ಪ್ರಾ. ಲಿ. ಚಾಲ್ತಿ ಖಾತೆ ನಂ 30620160150017 ನೇದ್ದಕ್ಕೆ ರೂ 5,85,000/- ಹಣವನ್ನು ಬ್ಯಾಂಕಿ ನಿಯಮಗಳನ್ನು ಉಲ್ಲಂಘಿಸಿ ಆರ್ ಟಿ ಜಿ ಎಸ್ ಮೂಲ ಹಣ ವರ್ಗಾವಣೆ ಮಾಡಿ ಬ್ಯಾಂಕಿಗೆ ನಂಬಿಕೆ ದ್ರೋಹ ಹಾಗೂ ಮೋಸ ಮಾಡಿದ್ದಾರೆಂದು ಗೊತ್ತಾಯಿತು ಅಂದರೆ ಸರಿಯಲ್ಲ. ಆರೋಪಿತರು ಯಾವುದೆ ಕಾರ ಖರೀದಿಸದೆ ನಮ್ಮ ಶೋ ರೂಂ ನಿಂದ ಖರೀದಿಸಿಲ್ಲ ಹಾಗೂ ಹಣ ಜಮಾ ಮಾಡಿಲ್ಲ ಅಂದರೆ ನಿಜ. ಈ ಬಗ್ಗೆ ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿದ್ದೇನೆ ಅಂದರೆ ನಿಜ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಿಪಿ-9 ರ ಮೇಲೆ ನನ್ನ ಸಹಿ ಇರುವುದಿಲ್ಲ. ನಾನು ಪೋಲೀಸರಿಗೆ ನಿಪಿ-24 ರಂತೆ ಮಾಹಿತಿ ನೀಡಿದ್ದು, ಹೇಳಿಕೆ ಕೊಟ್ಟ ಬಗ್ಗೆ ನೆನಪಿಲ್ಲ. ನಾನು ಹೇಳಿಕೆ ಕೊಟ್ಟಿರುವುದಿಲ್ಲ ಆದ್ದರಿಂದ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ವಿಚಾರಣೆಯನ್ನು ವ್ಯಾಟ್ಸಪ್ ಮೊಬೈಲ ವಿಡಿಯೋ ಕಾಲ್ ಮುಖಾಂತರ ಪಡೆದುಕೊಂಡಿದ್ದು ಸಾಕ್ಷಿ ಸಹಿ ಇರುವುದಿಲ್ಲ)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**